**ಸಿ.ಸಿ. ನಂ.20/2018**

**ಸಿ.ಡಬ್ಲೂ-1 ಪಿ.ಡಬ್ಲೂ-1**

**ದಿಃ 23.04.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದಲೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ದೊಣ್ಣೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಪಿ.ಕೆ.ಆರ್. ವಕೀಲರಿಂದಃ**

ಚಾಸಾ-4 ನಿಮ್ಮ ಮೈದುನ ಎಂದರೆ ಸರಿ. ಚಾಸಾ-5 ನಿಮ್ಮ ಮಗ ಎಂದರೆ ಸರಿ. 1ನೇ ಆರೋಪಿ ನಿಮ್ಮ ಮೈದುನ ಎಂದರೆ ಸರಿ. 2ನೇ ಆರೋಪಿ ನಿಮ್ಮ ವಾರಗಿತ್ತಿ ಎಂದರೆ ಸರಿ. ನಿಮ್ಮ ಮಾವನ ಹೆಸರು ಕೆಂಪೇಗೌಡ ಎಂದರೆ ಸರಿ. ನಿಮ್ಮ ಮಾವನ ಅಣ್ಣ ಈರೆಗೌಡ ಎಂದರೆ ಸರಿ. ಈರೇಗೌಡ ಮಗನೇ 1ನೇ ಆರೋಪಿ ಎಂದರೆ ಸರಿ.

ನಿಮ್ಮ ಮಾವನಿಗೆ 6 ಜನ ಗಂಡು ಮಕ್ಕಳು ಎಂದರೆ ಸರಿ. ನಿಮ್ಮ ಮಾವನ ಅಣ್ಣ ಈರೆಗೌಡರಿಗೆ 9 ಜನ ಗಂಡು ಮಕ್ಕಳು ಎಂದರೆ ಸರಿ. ನಿಮ್ಮ ಮಾವ ಹಾಗೂ ಅವರ ಅಣ್ಣ ಭರತವಾಡಿ ಗ್ರಾಮದ ಸ.ನಂ.54 ರಲ್ಲಿ ತಲಾ 5 ಎಕರೆ 38 ಗುಂಟೆಯನ್ನು ಹಂಚಿಕೊಂಡಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಮಾವನಿಗೆ ಬಂದ ಜಮೀನಿನಲ್ಲಿ ನೀವು ಉಳುಮೆ ಮಾಡುತ್ತಿಲ್ಲವಾ ಎಂದರೆ ಸಾಕ್ಷಿ ಇಲ್ಲ, ಕಾಡಿನ ಪಕ್ಕದಲ್ಲಿನ ಜಮೀನಿನಲ್ಲಿ ಸಾಗುವಳಿ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಸ.ನಂ.54 ರಲ್ಲಿ ನಿಮಗೆ ಆಸ್ತಿ ಸಿಕ್ಕಿಲ್ಲ ಎಂದರೆ ಸಾಕ್ಷಿ ಸಿಕ್ಕಿಲ್ಲ, ಮನೆ ಒಂದೇ ಸಿಕ್ಕಿರುವುದು ಎಂದು ಹೇಳುತ್ತಾರೆ.

ಸ.ನಂ.54 ರಲ್ಲಿ ನಿಮಗೆ ಜಮೀನು ಬಂದಿಲ್ಲ ಎಂದು ಮೊದಲಿನಿಂದಲೂ ತಗಾದೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.54 ರಲ್ಲಿ ನಿಮಗೆ ಹಕ್ಕು ಇದೆ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನೀವು ಸ.ನಂ.54 ರಲ್ಲಿ ನಿಮ್ಮ ಮೈದುನನನ್ನು ಭಾಗ ಕೇಳಬೇಕು, 1ನೇ ಆರೋಪಿಯ ಬಳಿ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿ

ನಾವು ಕೇಳಲು ಹೋಗಿಲ್ಲ  ಎಂದು ಹೇಳುತ್ತಾರೆ. ನಿಮ್ಮ ಹಾಗೂ 1ನೇ ಆರೋಪಿಯ ಮನೆ ಅಕ್ಕಪಕ್ಕ ಎಂದರೆ ಸರಿ. ನಿಮ್ಮ ಹಾಗೂ 1ನೇ ಆರೋಪಿಯ ಮನೆಯ ನಡುವೆ ಬೇಲಿ ಹಾಕಿರುತ್ತೀರಿ ಎಂದರೆ ಸಾಕ್ಷಿ 1ನೇ ಆರೋಪಿ ಹಾಕಿದ್ದು  ಎಂದು ಹೇಳುತ್ತಾರೆ. ನಿಮ್ಮ ಹಾಗೂ ಆರೋಪಿಯ ಮನೆ ನಡುವೆ ಬೇಲಿ ಇರುವುದರಿಂದ ನೀವು ಅವರ ಕಡೆ ಹೋಗಲು ಆಗುವುದಿಲ್ಲ, ಅವರು ನಿಮ್ಮ ಕಡೆ ಬರಲು ಆಗುವುದಿಲ್ಲ ಎಂದರೆ ಸರಿ. ದನ ಕರುಗಳು ಸಹ ಅವರ ಕಡೆಯಿಂದ ನಿಮ್ಮ ಕಡೆ ಹಾಗೂ ನಿಮ್ಮ ಕಡೆಯಿಂದ ಅವರ ಕಡೆ ಹೋಗಲು ಆಗುವುದಿಲ್ಲ ಎಂದರೆ ಸರಿ.

ನೀವು ನಿಮ್ಮ ಹಾಗೂ 1ನೇ ಆರೋಪಿಯ ಮನೆಯ ನಡುವೆ ಇರುವ ಬೇಲಿ ಪ್ರದೇಶವನ್ನು ನೀವು ಎಷ್ಟು ಬಾರಿ ಅಳತೆ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಒಮ್ಮೆ ಮಾಡಿಸಿರುತ್ತೇನೆ  ಎಂದು ಹೇಳುತ್ತಾರೆ. 1ನೇ ಆರೋಪಿ ಎಷ್ಟು ಬಾರಿ ಅಳತೆ ಮಾಡಿಸಿದರು ಎಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ನೀವು ಅಳತೆ ಮಾಡಿಸಿದಾಗ ರಾಮಚಂದ್ರ, ಲಕ್ಷ್ಮಣ, ನಿಮ್ಮ ಮೈದುನ ಮನಿಯಣ್ಣ, ಸಣ್ಣಹೈದ ರವರುಗಳು ಹಾಜರಿದ್ದು, ಅಳತೆ ಮಾಡಿದಾಗ ಕಲ್ಲುಗಳನ್ನು ಸಹ ಹಾಕಿಸಿರುತ್ತಾರೆಂದರೆ ಸಾಕ್ಷಿ 1ನೇ ಆರೋಪಿ ಹಾಕಿಸಲು ಬಿಡಲಿಲ್ಲ, ಯಾರ ಮಾತನ್ನು ಕೇಳಲಿಲ್ಲ, ಅವನೇ ಹಾಕಿಕೊಂಡ  ಎಂದು ಹೇಳುತ್ತಾರೆ. ಸರ್ವೆಯರ್ ರವರು ಮಾತುಕೇಳದೇ 1ನೇ ಆರೋಪಿ ಬೇಲಿ ಹಾಕಿಕೊಂಡನಾ ಎಂದರೆ ಸಾಕ್ಷಿ ಸರ್ವೆಯರ್ ಬಂದಿರಲಿಲ್ಲ, ನಮ್ಮ ಮನೆ ಮುಂದೆ ಬೇಲಿ ಹಾಕಿದ್ದರಿಂದ ನ್ಯಾಯದವರನ್ನು ಕರೆಸಿದ್ದು, ಅವರ ಮಾತು ಕೇಳದೇ ಬೇಲಿ ಹಾಕಿದ  ಎಂದು ಹೇಳುತ್ತಾರೆ. 1ನೇ ಆರೋಪಿ ಮತ್ತೊಮ್ಮೆ ಸರ್ವೆ ಮಾಡಿಸುವಂತೆ ನಿಮ್ಮ ಜಮೀನು ಒತ್ತುವರಿಯಾಗಿದ್ದರೆ ನಾನು ಬಿಟ್ಟುಕೊಡುತ್ತೇನೆ, ನಮ್ಮ ಕಡೆ ಒತ್ತುವರಿಯಾಗಿದ್ದರೆ ನೀವು ಬಿಟ್ಟುಕೊಡಿ ಎಂದು ಕೇಳಿದ್ದರು ಎಂದರೆ ಸರಿ. 1ನೇ ಆರೋಪಿ ಕೇಳಿದ ನಂತರ ಮತ್ತೋಮ್ಮೆ ಸರ್ವೆ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ನಿಮ್ಮ ಅತ್ತೆ, ಮಾವ ಮೃತಪಟ್ಟ ನಂತರ ನಿಮಗೂ ಹಾಗೂ 1ನೇ ಆರೋಪಿಗೂ ತಗಾದೆ ಎಂದರೆ ಸಾಕ್ಷಿ 1ನೇ ಆರೋಪಿಯೇ ಬರುತ್ತಾನೆ, ನಮಗೆ ತಗಾದೆ ಇಲ್ಲ  ಎಂದು ಹೇಳುತ್ತಾರೆ. ಪ್ರಕರಣ ಹೂಡುವ ಮುಂಚಿತವಾಗಿ ನಿಮಗೂ ಹಾಗೂ ಆರೋಪಿತರ ನಡುವೆ ಮನೆಯ ಜಾಗ ಹಾಗೂ ಬೇಲಿಯ ಸಂಬಂಧ ತಗಾದೆ ಎಂದರೆ ಸರಿಯಲ್ಲ.

ನಿಮ್ಮ ಮನೆಯ ಕೆಳಗಡೆ ಆರೋಪಿತರಿಗೆ ಸೇರಿದ ಮನೆ ಇದೆ ಎಂದರೆ ಸಾಕ್ಷಿ ಆರೋಪಿಯ ಮನೆಯ ಕೆಳಕ್ಕೆ ನಮಗೆ ಸೇರಿದ ಮನೆ ಇದೆ  ಎಂದು ಹೇಳುತ್ತಾರೆ. 1ನೇ ಆರೋಪಿ ಮನೆ ಕಡೆಯಿಂದ ಬಂದ ನೀರು ತಡೆದು,

ಕೆಳಗೆ ಹೋಗದಂತೆ ಮಾಡುತ್ತೀದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹಾಗೂ ಆರೋಪಿತರ ನಡುವೆ ತೆಂಗಿನ ಮರದ ವಿಚಾರವಾಗಿ ಗಲಾಟೆಯಾಗಿತ್ತಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಪಿರ್ಯಾದನ್ನು ತೆಂಗಿನ ಮರದ ಗಲಾಟೆಯ ಸಂಬಂಧ ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ, ಹಸು ಹೊಲ ಮೇಯ್ದುದ್ದರಿಂದ, ಆರೋಪಿತರು ಹಲ್ಲೆ ಮಾಡಿದ್ದರಿಂದ ಕೊಟ್ಟೆ ಎಂದು ಹೇಳುತ್ತಾರೆ.

ಘಟನೆ ನಡೆಯಿತು ಎಂದು ಹೇಳುವ ಜಾಗದಲ್ಲಿ ಎಷ್ಟು ವರ್ಷದಿಂದ ವಾಸ ಇದ್ದೀರಿ ಎಂದರೆ ಸಾಕ್ಷಿ 20 ವರ್ಷದಿಂದ ಎಂದು ಹೇಳುತ್ತಾರೆ. ನಾನು 6-7 ವರ್ಷದಿಂದ ವ್ಯವಸಾಯ ಮಾಡುತ್ತಿದ್ದೇನೆ. ಜಮೀನು ಉಳುಮೆಗೆ ಬೇರೆಯವರಿಗೆ ವಾರ, ಗುತ್ತಿಗೆ ಕೊಡುತ್ತಿದ್ದೇವು. ನಾವು ದನ-ಕರುಗಳನ್ನು ಸಾಕಿರುತ್ತೇವೆ.

1ನೇ ಆರೋಪಿಗೆ ಹುಟ್ಟಿದಾಗಿನಿಂದಲೂ ಬಲಗಾಲಿನ ಸ್ವಾಧೀನ ಇಲ್ಲ ಎಂದರೆ ಸಾಕ್ಷಿ ಸ್ವಲ್ಪ, ಚೆನ್ನಾಗಿ ಆರಂಭ ಮಾಡುತ್ತಿದ್ದ ಎಂದು ಹೇಳುತ್ತಾರೆ. 1ನೇ ಆರೋಪಿಗೆ ಬಲಗಾಲಿನ ಸ್ವಾಧೀನ ಇಲ್ಲದೇ ಇರುವುದರಿಂದ, ಯಾವುದೇ ಕೆಲಸ ಮಾಡಲಾಗದೇ ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಗಲಾಟೆಯಾದ ದಿನಾಂಕ, ತಿಂಗಳು, ವರ್ಷ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ, ಯಾವ ದಿನ ಎಂದು ಹೇಳುತ್ತೇನೆ ಎಂದು ಹೇಳುತ್ತಾರೆ. ಗಲಾಟೆಯಾದಾಗ ಯಾರ್ಯಾರು ಇದ್ದರು ಎಂದರೆ ಸಾಕ್ಷಿ ನಾನು ಹಾಗೂ ಆರೋಪಿತರು ಎಂದು ಹೇಳುತ್ತಾರೆ.

ನಿಪಿ-1 ನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ-1 ನ್ನು ನನಗೆ ಹಲ್ಲೆ ಮಾಡಿದ ಜಾಗದಲ್ಲಿ ಪೊಲೀಸರಿಗೆ ಹೇಳಿ ಬರೆಸಿರುತ್ತೇನೆ. ನಿಪಿ-1 ನ್ನು ಯಾರು ಬರೆದರು ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಓದಿಲ್ಲ, ಹಾಗಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನಾನು ಹೇಳಿದ್ದನ್ನು ಬರೆದಿದ್ದಾರೆ ಎಂದು ಹೇಳುತ್ತಾರೆ. ಗಲಾಟೆಯಾದ 3 ದಿನಗಳ ನಂತರ ದೂರು ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಊರಿನಲ್ಲಿ ಮಾತುಕತೆಗೆ ಆರೋಪಿತರು ಬರದೇ ಇದ್ದುದ್ದರಿಂದ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಗಲಾಟೆಯ ಮಾರನೇಯ ದಿನ ಆಸ್ಪತ್ರೆಗೆ ಬಂದಿರುತ್ತೇನೆ. ಗಲಾಟೆಯಾದ ದಿನವೇ ನೀವು ಆಸ್ಪತ್ರೆಗೆ ಬಂದಿಲ್ಲ ಎಂದರೆ ಸಾಕ್ಷಿ ನನ್ನ ಮಗ ಇರಲಿಲ್ಲ, ಅವನನ್ನು ಕರೆಸಿಕೊಂಡು, ನಂತರ ಬಂದಿರುತ್ತೇನೆ ಎಂದು ಹೇಳುತ್ತಾರೆ.

ನಿಮ್ಮ ಊರಿನಿಂದ ಹುಣಸೂರು ಸರ್ಕಾರಿ ಆಸ್ಪತ್ರೆ ಎಷ್ಟು ದೂರ ಆಗುತ್ತದೆಂದರೆ ಸಾಕ್ಷಿ ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಈರತ್ತಯ್ಯನಕೊಪ್ಪಲಿನಿಂದ ಹುಣಸೂರು ಸುಮಾರು 15 ಕಿ.ಮೀ ಆಗುತ್ತದೆಂದರೆ ಸಾಕ್ಷಿ ನೀವು ಹೇಳುತ್ತಿರುವುದರಿಂದ ಆಗಬಹುದು ಎಂದು ಹೇಳುತ್ತಾರೆ. ಈರತ್ತಯ್ಯನಕೊಪ್ಪಲಿನಿಂದ ಹನಗೋಡಿಗೆ 6 ಕಿ.ಮೀ ಆಗುತ್ತದೆ. ಹನಗೋಡಿನಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಖಾಸಗಿ ದವಾಖಾನೆ ಇವೆ ಎಂದರೆ ಸರಿ. ಹನಗೋಡಿನಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ದಿನದ 24 ಗಂಟೆ ವೈದ್ಯರು ಇರುತ್ತಾರೆಂದರೆ ಸರಿ. ನಿಮಗೆ ನಿಜವಾಗಿಯು ಹಲ್ಲೆ ಮಾಡಿದಿದ್ದರೆ ಹನಗೋಡಿಗೆ ಚಿಕಿತ್ಸೆಗೆ ಹೋಗಬಹುದಿತ್ತು ಎಂದರೆ ಸಾಕ್ಷಿ ಜಾಸ್ತಿ ಪೆಟ್ಟಾದ್ದರಿಂದ ಹುಣಸೂರಿಗೆ ಕರೆದುಕೊಂಡು ಬಂದರು ಎಂದು ಹೇಳುತ್ತಾರೆ. ರಕ್ತಗಾಯವಾಗಿತ್ತಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ರಕ್ತ ಬಟ್ಟೆಗೆಲ್ಲಾ ಆಗಿತ್ತಾ ಎಂದರೆ ಸಾಕ್ಷಿ ಬೇರೆ ಬಟ್ಟೆಯಲ್ಲಿ ಒರೆಸಿದ್ದರು ಎಂದು ಹೇಳುತ್ತಾರೆ. ರಕ್ತ ಒರೆಸಿದ ಬಟ್ಟೆಯನ್ನು ಪೊಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ನಾನು ಸದರಿ ಬಟ್ಟೆಯನ್ನು ತೊಳೆದಿದ್ದೇನೆ ಎಂದು ಹೇಳುತ್ತಾರೆ.

ಹುಣಸೂರು ಆಸ್ಪತ್ರೆಯಲ್ಲಿ ಎಷ್ಟು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೀರಾ ಎಂದರೆ ಸಾಕ್ಷಿ ಚುಚ್ಚುಮದ್ದು ತೆಗೆದುಕೊಂಡು ವಾಪಸ್ಸು ಹೋಗಿರುತ್ತೇವೆ ಎಂದು ಹೇಳುತ್ತಾರೆ. ಚುಚ್ಚುಮದ್ದು ತೆಗೆದುಕೊಂಡು ವಾಪಸ್ಸು ಹೋಗುವುದಾಗಿದ್ದರೇ, ಹನಗೋಡಿನಲ್ಲಿ ಚಿಕಿತ್ಸೆ ಪಡೆಯಬಹುದಿತ್ತು, ಆರೋಪಿತರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೀರಿ ಎಂದರೆ ಸರಿಯಲ್ಲ.

ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಪೊಲೀಸರು ಬರೆದುಕೊಂಡು, ಫೋಟೋ ತೆಗೆದುಕೊಂಡು ಬಂದಿರುತ್ತಾರೆ. ನಿಪಿ-2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನಿಪಿ-2 ರಂತೆ ಮಹಜರ್ ನ್ನು ಬೆಳಿಗ್ಗೆ 6.00 ರಿಂದ 6.30 ವರೆಗೂ ಜರುಗಿಸಲಾಯಿತು. ನಿಪಿ-2 ರಂತೆ ಮಹಜರ್ ಜರುಗಿಸುವ ಕಾಲಕ್ಕೆ ಯಾರ್ಯಾರು ಹಾಜರಿದ್ದರು ಎಂದರೆ ಸಾಕ್ಷಿ ಯಾರು ಹಾಜರಿರಲಿಲ್ಲ, ನಾನು ಕಿರುಚುವುದನ್ನು ನೋಡಿ ಚಾಸಾ-4 ಬಂದಿರುತ್ತಾರೆ ಎಂದು ಹೇಳುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ: ನನ್ನ ಜಮೀನು, ಪಶ್ಚಿಮಕ್ಕೆ: ಆರೋಪಿತರ ಮನೆ, ಉತ್ತರಕ್ಕೆ: ಆರೋಪಿತರ ಹೊಲ ಮತ್ತು ದಕ್ಷಿಣಕ್ಕೆ: ನಮ್ಮ ಮೈದುನರ ಹೊಲ ಮತ್ತು ಮನೆ ಎಂದು ಹೇಳುತ್ತಾರೆ. ಪೊಲೀಸರು ಸ್ಥಳದಿಂದ ದೊಣ್ಣೆ

ತಂದರು. ಸದರಿ ದೊಣ್ಣೆ ಘಟನಾ ಸ್ಥಳದಲ್ಲೇ ಇತ್ತು. ಸದರಿ ಜಾಗದಲ್ಲಿ ಎಷ್ಟು ದೊಣ್ಣೆಗಳು ಇದ್ದವು ಎಂದರೆ ಸಾಕ್ಷಿ ಹಲ್ಲೆ ಮಾಡಿದ ಒಂದು ದೊಣ್ಣೆ ಇತ್ತು ಎಂದು ಹೇಳುತ್ತಾರೆ. ಹಲ್ಲೆ ಮಾಡಿದರು ಎಂದು ಹೇಳುವ ದೊಣ್ಣೆ ಎಷ್ಟು ಉದ್ದ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಊರಿನಿಂದ ಮುಂದಕ್ಕೆ ಕಾಡು ಎಂದರೆ ಸಾಕ್ಷಿ ನಮ್ಮ ಊರು ಬಿಟ್ಟು ಭರತವಾಡಿ ಮತ್ತು ವೀರನಹೊಸಹಳ್ಳಿ ಎರಡು ಊರುಗಳು ಇವೆ ಎಂದು ಹೇಳುತ್ತಾರೆ. ಮು.ಮಾ-1 ನಿಮ್ಮ ಮನೆಯಲ್ಲಿ ಇದ್ದ ಸೌದೆಯಾಗಿದ್ದು, ಅದನ್ನೇ ನೀವೇ ಪೊಲೀಸರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಘಟನಾ ಸ್ಥಳದಲ್ಲಿ ಇದ್ದುದ್ದನ್ನು ಎತ್ತಿಕೊಂಡು ಬಂದರು ಎಂದು ಹೇಳುತ್ತಾರೆ. ಗಲಾಟೆಯ ಸಂದರ್ಭದಲ್ಲಿ ಯಾರ್ಯಾರು, ಏನೆನು ಮಾಡಿದರು ಎಂದು ನಿಖರವಾಗಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಹೇಳುತ್ತೇನೆ ಎಂದು ಹೇಳುತ್ತಾರೆ. 1ನೇ ಆರೋಪಿ ನನ್ನನ್ನು ತಬ್ಬಿ ಹಿಡಿದಿದ್ದನು. 1ನೇ ಆರೋಪಿ ಅಂಗವಿಕಲನಾಗಿದ್ದು, ಅವನು ನಿಮ್ಮ ಮೇಲೆ ಹಲ್ಲೆ ಮಾಡಿಲ್ಲ, ತಬ್ಬಿನೂ ಹಿಡಿದಿಲ್ಲ ಎಂದರೆ ಸರಿಯಲ್ಲ. ನಿಮಗೆ ಏಲ್ಲಿಲ್ಲಿ ಏಟಾಗಿದೆ ಎಂದರೆ ಸಾಕ್ಷಿ ರಟ್ಟೆ ಹಾಗೂ ಬೆನ್ನಿಗೆ ಎಂದು ಹೇಳುತ್ತಾರೆ. ರಟ್ಟೆ ಹಾಗೂ ಬೆನ್ನನ್ನು ಸ್ಕ್ಯಾನ್ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಈ ಹಿಂದೆ ಗಲಾಟೆಯಾದ ಸಂಬಂಧ ಪೊಲೀಸರಿಗೆ ದೂರು ನೀಡಿದ ಬಗ್ಗೆ ನಿಮ್ಮ ಬಳಿ ಪಿರ್ಯಾದು ಇದೆಯೇ ಎಂದರೆ ಸಾಕ್ಷಿ ಏನೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಪಂಚಾಯಿತಿ ಮಾಡಲು ಯಾರ್ಯಾರು ಪಂಚಾಯಿತಿದಾರರಿಗೆ ನೀಡಲಾಗಿತ್ತು ಎಂದರೆ ಸಾಕ್ಷಿ 1ನೇ ಆರೋಪಿ ಅಣ್ಣನ ಮಗ ರಾಮಚಂದ್ರ ಮತ್ತು ನನ್ನ ಮೈದುನ ಮಣಿಗೆ ಎಂದು ಹೇಳುತ್ತಾರೆ.

ಗಲಾಟೆಯು ಬೆಳಿಗ್ಗೆ 6.00 ರಿಂದ 6.30 ಗಂಟೆಗೆ ಆಗಿರುತ್ತದೆ. ನೀವು ವ್ಯವಸಾಯ ಮಾಡುತ್ತಿಲ್ಲ, ದನ-ಕರುಗಳನ್ನು ಸಾಕಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಾಗೂ 1ನೇ ಆರೋಪಿಯ ಮನೆಯ ನಡುವೆ ಇರುವ ಬೇಲಿ ದಾಟಿ ನಿಮ್ಮ ದನಗಳು ಹೋಗಲು ಆಗುವುದಿಲ್ಲ, ಅವರ ದನಗಳು ಬರಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ದನಗಳು ಆರೋಪಿತರ ಜಾಗದಲ್ಲಿ ಹೋಗಿಲ್ಲ, ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಅವರೆ ಫಸಲು ದೀಪಾವಳಿ ತಿಂಗಳಲ್ಲಿ ಬರುತ್ತದೆ. ನವೆಂಬರ್-ಡಿಸೆಂಬರ್ ಬೇಸಿಗೆ ಕಾಲ ಎಂದರೆ ಸಾಕ್ಷಿ ಸಂಕ್ರಾಂತಿ ವರೆಗೂ ಇರುತ್ತದೆ ಎಂದು ಹೇಳುತ್ತಾರೆ.

( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.
ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.